ನಿಮ್ಮೊಡನೆ

# ಮಹಿಳೆಯರೇಕೆ ಕಡಿಮೆ?

**ರಾಜ್ಯದ ಮೂರೂ ಮುಖ್ಯ ಪಕ್ಷಗಳು ಉಮೇದುವಾರರ ಪಟ್ಟಿ ಬಿಡುಗಡೆ ಮಾಡಿವೆ. ಎಂದಿನಂತೆ ಮಹಿಳೆಯರಿಗೆ ಅತ್ಯಂತ ಕಡಿಮೆ ಅವಕಾಶ ದೊರೆತಿದೆ. ಗೆಲ್ಲುವ ಸಾಧ್ಯತೆಯ ನೆಪವನ್ನು ಮುಂದಿಟ್ಟುಕೊಂಡು, ಮಹಿಳೆಯರಿಗೆ ಚುನಾವಣಾ ಟಿಕೆಟ್ ನಿರಾಕರಿಸುವ ಊಳಿಗಮಾನ್ಯ ಧೋರಣೆ ಈ ಸಲವೂ ಪುನರಾವರ್ತನೆಯಾಗಿದೆ!**

ಮಹಿಳಾ ಅಭಿವೃದ್ಧಿ ಸೂಚ್ಯಂಕಗಳು ನಮ್ಮಲ್ಲಿ ಸಕಾರಾತ್ಮಕ ದಿಕ್ಕಿನಲ್ಲಿ ಚಲಿಸುತ್ತಿವೆ. ಮಹಿಳೆಯರ ಸಾಕ್ಷರತೆಯ ಪ್ರಮಾಣದಲ್ಲಿ ಏರಿಕೆ ಉಂಟಾಗಿದೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ರಾಜ್ಯದ ಜನಸಂಖ್ಯೆ ಮತ್ತು ಮತದಾರರ ಪಟ್ಟಿಯಲ್ಲೂ ಮಹಿಳೆಯರು ಹತ್ತಿರ ಹತ್ತಿರ ಸಮಪ್ರಮಾಣದಲ್ಲಿದ್ದಾರೆ. ಆದರೆ ವಿಧಾನಸಭೆ ಮತ್ತು ಸಂಸತ್ತಿಗೆ ಪ್ರತಿನಿಧಿಗಳನ್ನು ಆರಿಸುವ ಪ್ರಕ್ರಿಯೆಯಲ್ಲಿ ಮಾತ್ರ ಮಹಿಳೆಯರ ಇರುವಿಕೆಯನ್ನೇ ಕಡೆಗಣಿಸುವ ಮಟ್ಟಿಗೆ ಅವರಿಗೆ ಏಕೆ ಅವಕಾಶ ನಿರಾಕರಿಸಲಾಗುತ್ತಿದೆ?

ಮಹಿಳಾ ಪ್ರಾತಿನಿಧ್ಯದ ಪ್ರಮಾಣದಲ್ಲಿ ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಗೆ ಏರಿಕೆ ಆಗಬಹುದು ಎಂದು ನಿರೀಕ್ಷಿಸುವುದು ಮತ್ತು ಆಗಬೇಕು ಎಂದು ಆಶಿಸುವುದು ಸಹಜವೇ. ಆದರೆ ಕರ್ನಾಟಕದ ವಿಧಾನಸಭೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವನ್ನು ಅವಲೋಕಿಸಿದಾಗ ಯಾವುದೇ ಕಾಲಘಟ್ಟದಲ್ಲಿ ಅವರ ಪ್ರಮಾಣ ಶೇಕಡ ಹತ್ತನ್ನೂ ತಲುಪಿಲ್ಲ ಎನ್ನುವುದು ವಿಪರ್ಯಾಸದ ಸಂಗತಿ.

ಈಗ ಅಸ್ತಿತ್ವದಲ್ಲಿರುವ 14ನೇ ವಿಧಾನಸಭೆಯಲ್ಲಿ ಇರುವ ಶಾಸಕಿಯರ ಸಂಖ್ಯೆ ಬರೀ ಎಂಟು. ಈ ಪೈಕಿ ಒಬ್ಬರು ನಾಮನಿರ್ದೇಶಿತ ಶಾಸಕಿ. ಇವರೂ ಸೇರಿದರೆ ನಮ್ಮ ವಿಧಾನಸಭೆಯ ಸದಸ್ಯಬಲ 225. ಇಲ್ಲಿ ಮಹಿಳೆಯರಿಗೆ ದೊರೆತಿರುವ ಪ್ರಾತಿನಿಧ್ಯದ ಪ್ರಮಾಣ ಬರೀ ಶೇಕಡ 3. ಮೊದಲ ಮತ್ತು ಎರಡನೆಯ ವಿಧಾನಸಭೆಗಳಲ್ಲಿ ಮಾತ್ರ ಮಹಿಳೆಯರ ಪ್ರಾತಿನಿಧ್ಯ ಕ್ರಮವಾಗಿ ಶೇ 7.26 ಮತ್ತು ಶೇ 8.65ರಷ್ಟು ಇತ್ತು ಎಂದು ದಾಖಲಾಗಿದೆ. ಉಳಿದಂತೆ ಮಿಕ್ಕ ಎಲ್ಲ ವಿಧಾನಸಭೆಗಳಲ್ಲಿ ಅವರ ಪ್ರಾತಿನಿಧ್ಯ ಶೇ 5ರಷ್ಟನ್ನೂ ತಲುಪಿಲ್ಲ ಎಂಬುದು ಶೋಚನೀಯ.

ಈಗ ಹದಿನೈದನೇ ವಿಧಾನಸಭೆ ಚುನಾವಣೆಗೆ ರಾಜ್ಯದ ಮೂರೂ ಮುಖ್ಯ ಪಕ್ಷಗಳು ಉಮೇದುವಾರರ ಪಟ್ಟಿ ಬಿಡುಗಡೆ ಮಾಡಿವೆ. ಇದರಲ್ಲಿ ಎಂದಿನಂತೆ ಮಹಿಳೆಯರಿಗೆ ಅತಿ ಕಡಿಮೆ ಅವಕಾಶ ದೊರೆತಿದೆ. ಗೆಲ್ಲುವ ಸಾಧ್ಯತೆಯ ನೆಪವನ್ನು ಮುಂದಿಟ್ಟುಕೊಂಡು ಮಹಿಳೆಯರಿಗೆ ಅವಕಾಶ ನಿರಾಕರಿಸುವ ಊಳಿಗಮಾನ್ಯ ಮನೋಧೋರಣೆ ಈ ಸಲವೂ ಪುನರಾವರ್ತನೆಯಾಗಿದೆ! 218 ಕ್ಷೇತ್ರಗಳಿಗೆ ಕಾಂಗ್ರೆಸ್ ಬಿಡುಗಡೆ ಮಾಡಿದ ಮೊದಲ ಪಟ್ಟಿಯಲ್ಲಿ ಮಹಿಳೆಯರಿಗೆ ಅವಕಾಶ ಸಿಕ್ಕಿರುವುದು 15 ಕ್ಷೇತ್ರಗಳಲ್ಲಿ ಮಾತ್ರ. ಬಿಜೆಪಿಯ ಮೂರು ಪಟ್ಟಿಗಳಲ್ಲಿನ ಸ್ಥಿತಿ ಇನ್ನೂ ನಿರಾಶಾದಾಯಕ.

ಗೆಲ್ಲುವ ಮಾನದಂಡವನ್ನು ಮಹಿಳೆಯರಿಗೆ ಮಾತ್ರ ಏಕೆ ಅನ್ವಯಿಸಲಾಗುತ್ತಿದೆ? ಚುನಾವಣೆಯಲ್ಲಿ ಗೆಲುವು ಎನ್ನುವುದು ಯಾರಿಗೂ ಸಲೀಸಾಗಿ ಒಲಿದುಬರುವುದಿಲ್ಲ. ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಬಹುದಾದ ಇಬ್ಬರು– ಮೂವರಲ್ಲಿ ಕೆಪಿಸಿಸಿ ಅಧ್ಯಕ್ಷ ಜಿ. ಪರಮೇಶ್ವರ್ ಕೂಡ ಒಬ್ಬರಾಗಿದ್ದರು. ಕಳೆದ ಚುನಾವಣೆಯಲ್ಲಿ ಅವರೇ ಸೋತರಲ್ಲ! ಕಳೆದ ಲೋಕಸಭಾ ಚುನಾವಣೆಯಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಸೋಲು ಕಾಣಲಿಲ್ಲವೇ? ಅಷ್ಟೇಕೆ, ದಿನದ 24 ತಾಸೂ ರಾಜಕೀಯವನ್ನೇ ಹಾಸಿ–ಹೊದೆಯುವ ಎಚ್.ಡಿ.ದೇವೇಗೌಡ ಅವರೇ ತೇಜಸ್ವಿನಿ ಎದುರು ಸೋಲುಂಡರಲ್ಲವೇ? ಸೋಲಿಲ್ಲದ ಸರದಾರನೆನಿಸಿದ್ದ ಬಿ. ಶಂಕರಾನಂದ ಅವರಿಗೆ ಮೊದಲ ಬಾರಿಗೆ ಸೋಲಿನ ಕಹಿ ಉಣಿಸಿದ್ದು ರತ್ನಮಾಲಾ ಸವಣೂರ ಎಂಬ ಮಹಿಳೆಯಲ್ಲವೇ?

ಹಣಬಲ, ತೋಳ್ಬಲ, ದೇವರು–ಧರ್ಮಗಳ ದುರ್ಬಳಕೆ, ಜಾತಿಯ ದಾಳ... ಇಂತಹ ತಂತ್ರ, ಕುತಂತ್ರಗಳ ಆಧಾರದಲ್ಲೇ ಸೋಲು ಗೆಲುವು ನಿರ್ಧಾರ ಆಗುತ್ತಿದೆ. ಅಂದಮೇಲೆ ಮಹಿಳೆಯರಿಗೆ ಮಾತ್ರ ಪ್ರತ್ಯೇಕವಾಗಿ ಅನ್ವಯಿಸಬಹುದಾದ ಗೆಲ್ಲುವ ಸೂತ್ರಗಳು ಏನೂ ಇಲ್ಲ ಎಂದಾಯಿತಲ್ಲ! ಪಕ್ಷಗಳಿಗೆ ಬದ್ಧತೆ ಇದ್ದರೆ ಮೀಸಲಾತಿಗಾಗಿ ಕಾಯದೆ, ಪುರುಷರ ಗೆಲುವಿಗೆ ಬಳಸುವ ಮಾನದಂಡಗಳನ್ನೇ ಬಳಸಿ ಮಹಿಳೆಯರನ್ನೂ ಗೆಲ್ಲಿಸಿಕೊಳ್ಳಬಹುದು. ಆಡಳಿತ ನಿಭಾಯಿಸುವ ವಿಚಾರದಲ್ಲೂ ಮಹಿಳೆಯರು ಕಡಿಮೆ ಇಲ್ಲ ಎಂಬುದನ್ನು ಅನೇಕರು ನಮ್ಮಲ್ಲೇ ಸಾಬೀತುಪಡಿಸಿದ್ದಾರೆ. ಕೆ.ಎಸ್. ನಾಗರತ್ನಮ್ಮ ಅವರು 1972ರಲ್ಲೇ ವಿಧಾನಸಭಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಈ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸಿದರಲ್ಲವೇ? ಪಾನನಿಷೇಧವನ್ನು ರದ್ದು ಮಾಡಿದ್ದನ್ನು ವಿರೋಧಿಸಿ ಯಶೋಧರಮ್ಮ ದಾಸಪ್ಪ ಅವರು ಸಚಿವೆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದಕ್ಕಿಂತ ಹೆಚ್ಚಿನ ಬದ್ಧತೆ ಬೇಕೇ?

**■ ಎನ್. ಉದಯಕುಮಾರ್**

